**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 242/2014 ಸಿ.ಡಬ್ಲ್ಯೂ –05 ಪಿ.ಡಬ್ಲ್ಯೂ -05

| | | |
|---|---|---|
| ಹೆಸರು | ಃ | ಸಿದ್ದಲಿಂಗ |
| ತಂದೆಃ ಗಂಡ | ಃ | ರೇವಣಸಿದ್ದಪ್ಪಾ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕುಡಕಿ |

ದಿನಾಂಕಃ೧೮.೦೩.೨೦೨೫

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ತಂದೆ, ಚಾಸಾ-೪ ನನ್ನ ಸಹೋದರ ಚಾಸಾ-೨, ೩, ೬, ೭ ರವರ ಪರಿಚಯ ಇರುತ್ತದೆ.

ಸುಮಾರು 12 ವರ್ಷಗಳ ಹಿಂದೆ ಆರೋಪಿತರೆಲ್ಲರೂ ಕೂಡಿಕೊಂಡು ಚಾಸಾ-೧ ರವರಿಗೆ ಹೊಡೆ ಬಡೆ ಮಾಡಿರುತ್ತಾರೆ. ರೇವಣಸಿದ್ದೇಶ್ವರ ಗುಡಿಯ ಹಿಂದುಗಡೆ ಚಾಸಾ-೧ ರವರು ದಿಂಡು ತುಂಬಲು ಹೋದಾಗ ಆರೋಪಿತರು ಹೊಡೆ ಬಡೆ ಮಾಡಿರುತ್ತಾರೆ. ನನ್ನ ತಂದೆ ಮೂರ್ಚೆ ಹೋಗಿ ಬಿದ್ದಿದ್ದರು, ಆಗ ನಾನು ಹೋಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಮ್ಮ ತಂದೆಯವರು ಸುಮಾರು 8 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಬೀರಪ್ಪ ದೇವರ ಗುಡಿಗೆ ಸಂಬಂಧಪಟ್ಟಂತೆ ೪ ಎಕರೆ ಜಮೀನು ಇರುತ್ತದೆ, ಅದರ ಜಮಿನು ಸ.ನಂ. ೫೩ ಇರುತ್ತದೆ ಎಂದರೆ ಸರಿ. ಪ್ರತಿ ವರ್ಷವೂ ಒಬ್ಬೊಬ್ಬರಂತೆ ನಾವು ಸಾಗುವಳಿ ಮಾಡುತ್ತೇವೆ ಎಂದರೆ ಸಾಕ್ಷಿ ಇನ್ನು ನಮಗೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಮತ್ತು ನಮ್ಮ ನಡುವೆ ಸದರಿ ಜಮೀನಿನ ಸಲುವಾಗಿ ವೈಮನಸ್ಸಿರುತ್ತದೆ ಎಂದರೆ ಸರಿ. ಆರೋಪಿತರೆಲ್ಲರೂ ಸೇರಿ ಚಾಸಾ-೧ ರವರನ್ನು ನಿಲ್ಲಿಸಿ ಆರೊಪಿ ನಂ.೧ ಈ ರಂಡಿ ಮಗನನ್ನು ಖಲಾಸ ಮಾಡಿ ಎಂದು

ಹೇಳಿರುತ್ತಾನೆ ಎಂದರೆ ಸರಿ. ಆರೋಪಿ ನಂ.೨ ಬಡಿಗೆಯಿಂದ ಚಾಸಾ-೧ ರವರ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆ ಎಂಧರೆ ಸರಿ. ಆರೋಪಿ ನಂ.೬ ಚಾಸಾ-೧ ರವರಿಗೆ ಕಲ್ಲಿನಿಂದ ಎಡಗೈ ಮುಂಗೈಗೆ ಮತ್ತು ಅಂಗೈಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂಧರೆ ಸರಿ. ಆರೋಪಿ ನಂ.೬ ರವರು ಚಾಸಾ-೧ ರವರನ್ನು ಹಿಡಿದುಕೊಂಡಿರುತ್ತಾರೆ, ಆರೋಪಿ ನಂ.೫ ರವರು ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-೪ ರವರು ಮತ್ತು ನಾನು ಜಗಳದ ಬಾಯಿ ಕೇಳಿ ಓಡಿ ಬಿಡಿಸಲು ಹೋದಾಗ ಆರೋಪಿ ನಂ.೩ ಮತ್ತು ೭ ರವರು ಚಾಸಾ-೪ ರವರನ್ನು ಕಲ್ಲಿನಿಂದ ಬಲ ಭುಜಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ಆರೊಪಿ ನಂ.೭ ಚಾಸಾ-೪ ರವರಿಗೆ ಕಪಾಳಕ್ಕೆ ಹೊಡೆದಿರುತ್ತಾನೆ ಎಂಧರೆ ಸರಿ. ನಂತರ ನಾನು, ಗ್ಯಾನಪ್ಪ, ಚಾಸಾ-೪ ಮತ್ತು ಚಾಸಾ-೭ ರವರು ಜಗಳ ಬಿಡಿಸಿರುತ್ತೇವೆ ಎಂಧರೆ ಸರಿ. ಆರೋಪಿತರೆಲ್ಲರೂ ಸೇರಿ ಬೋಸಡಿ ಮಗನೇ ನೀ ಊರಲ್ಲಿ ಹೇಗೆ ಬಾಳುವೆ ಮಾಡುತ್ತೀ ಎಂದು ನೋಡುತ್ತೇವೆ ಎಂಧು ಹೇಳಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಾನು ಈ ರೀತಿಯಾಗಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮೂರು ಕಲ್ಲುಗಳು ಮತ್ತು ಒಂದು ಬಡಿಗೆಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಮು.ಮಾ-೧ ರಿಂದ ೪ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಸ್.ಎ.ಕೆ. ವಕೀಲರಿಂದ**

ನಾನು ಈ ಪ್ರಕರಣ ಕುರಿತು ಇದೇ ಮೊದಲ ಬಾರಿಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣ ಕುರಿತು ಎಲ್ಲಿಯೂ ನಾನು ಸಾಕ್ಷಿ ನುಡಿದಿರುವುದಿಲ್ಲ ಎಂಧರೆ ಸರಿ. ಚಾಸಾ-೧ ನನ್ನ ತಂದೆ ಎಂದರೆ ಸರಿ, ಅವರ ಪರವಾಗಿ ನಾನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂಧರೆ ಸರಿ. ಬೀರಪ್ಪ ದೇವಸ್ಥಾನವನ್ನು ಆರೋಪಿತರು ಮತ್ತು ನಾವು ಅರ್ಚಕರು ಎಂದು ಹೇಳಿ ಪಾಳಿಯ ಪ್ರಕಾರ ಪೂಜೆ ಮಾಡುತ್ತೇವೆ ಎಂದರೆ ಸರಿ. ಪೂಜೆ ಯಾರ ಪಾಳಿ ಬರುತ್ತದೆಯೋ ಅವು ಪೂಜೆ ಮಾಡಬೇಕು ಮತ್ತು ಆ ಜಮೀನನ್ನು ಬಿತ್ತು ಬೆಳೆ ಮಾಡಬೇಕು ಎಂದರೆ ಸರಿ. ಸದರಿ ಜಮೀನನ್ನು ಬಿತ್ತು ಬೆಳೆ ಮಾಡುವ ಸಲುವಾಗಿ ಆರೋಪಿತರು ಮತ್ತು ನಮ್ಮ ನಡುವೆ ವೈಮನಸ್ಸಿರುತ್ತದೆ ಎಂದರೆ ಸರಿ. ಸದರಿ ಜಮೀನಿನ ಸಲುವಾಗಿ ವೈಮನಸ್ಸಿದ್ದ ಕಾರಣ ಈ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ.

ನನ್ನ ತಂದೆಯವರು ದಿಂಡು ತುಂಬಿಸಲು ಹೋದಾಗ ನಾನು ಮನೆಯಲ್ಲಿದ್ದೆನು. ನನ್ನ ತಂದೆಯವರು ದಿಂಡು ತುಂಬಿಸಲು ಬೆಳಿಗ್ಗೆ ೮.೦೦ ಗಂಟೆಗೆ ಹೋಗಿರುತ್ತಾರೆ. ಘಟನೆ ನಡೆಯುವ ಸ್ಥಳಕ್ಕೆ ನಾನು ೮.೧೫ ಗಂಟೆಗೆ ಹೋಗಿರುತ್ತೇನೆ. ಸದರಿ ಘಟನೆಯನ್ನು ಕುರಿತು ಅಲ್ಲಿ ಓಡಾಡುವ ಜನರು ಹೇಳಿರುತ್ತಾರೆ. ನಾನು ಹೋಗುವುದಕ್ಕಿಂತ ಪೂರ್ವದಲ್ಲಿ ಏನೇನು ಘಟನೆ ಆಗಿತ್ತು ಎಂದು

ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗುವುದಕ್ಕಿಂತ ಪೂರ್ವದಲ್ಲಿ ಯಾವ ಆರೋಪಿತರು ಬಂದಿದ್ದರು, ಹೇಗೆ ಬಂದಿದ್ದರು, ಯಾರು ಯಾರಿಗೆ ಹೊಡೆದರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ನಾನು ಘಟನೆ ನಂತರ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೋಗಿ ನೋಡಿದಾಗ ಅಲ್ಲಿ ಸುಮಾರು ೮-೧೦ ಜನರು ಇದ್ದರು. ಘಟನಾ ಸಮಯದಲ್ಲಿ ನಾನು ಇರಲಿಲ್ಲ, ಆದಕಾರಣ ಯಾರು ಯಾವುದರಿಂದ ಹೊಡೆದರು ಎಂದು ನನಗೆ ಹೇಳಲು ಬರುವುದಿಲ್ಲ ಎಂಧರೆ ಸರಿ ಅಲ್ಲ. ಸದರಿ ಜಮೀನನ್ನು ನಾವೇ ಉಳುಮೆ ಮಾಡಬೇಕೆಂಬ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿ.

ಮು.ಮಾ-೧ ರಿಂದ ೪ ರಂತಹ ಕಲ್ಲು ಮತ್ತು ಕಟ್ಟಿಗೆಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂಧರೆ ಸರಿ ಅಲ್ಲ. ನಮ್ಮ ತಂದೆಯವರು ಯಾವುದೇ ಘಟನೆ ನಡೆಯದಿದ್ದರೂ ಖೊಟ್ಟಿ ಪ್ರಕರಣವನ್ನು ದಾಖಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿತರನ್ನು ನಾವೇ ಹೊಡೆದು ಆರೋಪಿತರೇ ಹೊಡೆ ಬಡೆ ಮಾಡಿದ್ದಾರೆ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿ ಅಲ್ಲ. ಆರೋಪಿತರು ಯಾವತ್ತು ಹೊಡೆ ಬಡೆ ಮಾಡಿರುವುದಿಲ್ಲ, ಆರೊಪಿತರು ಹೊಡೆ ಬಡೆ ಮಾಡಿದ್ದಾರೆ, ಜೀವ ಬೆದರಿಕೆ ಹಾಕಿದ್ದಾರೆ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಸುಮಾರು 12 ವರ್ಷಗಳ ಹಿಂದೆ ಆರೋಪಿತರೆಲ್ಲರೂ ಕೂಡಿಕೊಂಡು ಚಾಸಾ-೧ ರವರಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ರೇವಣಸಿದ್ದೇಶ್ವರ ಗುಡಿಯ ಹಿಂದುಗಡೆ ಚಾಸಾ-೧ ರವರು ದಿಂಡು ತುಂಬಲು ಹೋದಾಗ ಆರೋಪಿತರು ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನನ್ನ ತಂದೆ ಮೂರ್ಛೆ ಹೋಗಿ ಬಿದ್ದಿದ್ದರು, ಆಗ ನಾನು ಹೋಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ, ನಮ್ಮ ತಂದೆಯವರು ಸುಮಾರು 8 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಬೀರಪ್ಪ ದೇವರ ಗುಡಿಗೆ ಸಂಬಂಧಪಟ್ಟಂತೆ ೪ ಎಕರೆ ಜಮೀನು ಇರುತ್ತದೆ, ಅದರ ಜಮಿನು ಸ.ನಂ. ೫೩ ಇರುತ್ತದೆ, ಪ್ರತಿ ವರ್ಷವೂ ಒಬ್ಬೊಬ್ಬರಂತೆ ನಾವು ಸಾಗುವಳಿ ಮಾಡುತ್ತೇವೆ ಇನ್ನು ನಮಗೆ ಬಂದಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿತರೆಲ್ಲರೂ ಸೇರಿ ಚಾಸಾ-೧ ರವರನ್ನು ನಿಲ್ಲಿಸಿ ಆರೊಪಿ ನಂ.೧ ಈ ರಂಡಿ ಮಗನನ್ನು ಖಲಾಸ ಮಾಡಿ ಎಂದು ಹೇಳಿರುತ್ತಾನೆ, ಆರೋಪಿ ನಂ.೨ ಬಡಿಗೆಯಿಂದ ಚಾಸಾ-೧ ರವರ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆ, ಆರೋಪಿ ನಂ.೬ ಚಾಸಾ-೧ ರವರಿಗೆ ಕಲ್ಲಿನಿಂದ ಎಡಗೈ ಮುಂಗೈಗೆ ಮತ್ತು ಅಂಗೈಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೬ ರವರು ಚಾಸಾ-೧ ರವರನ್ನು ಹಿಡಿದುಕೊಂಡಿರುತ್ತಾರೆ, ಆರೋಪಿ ನಂ.೫ ರವರು ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-೪ ರವರು ಮತ್ತು ನಾನು ಜಗಳದ ಬಾಯಿ ಕೇಳಿ ಓಡಿ ಬಿಡಿಸಲು ಹೋದಾಗ ಆರೋಪಿ ನಂ.೩ ಮತ್ತು ೭ ರವರು ಚಾಸಾ-೪ ರವರನ್ನು ಕಲ್ಲಿನಿಂದ ಬಲ ಭುಜಕ್ಕೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ